# ಸಿದ್ಧಲಿಂಗಯ್ಯನವರ 'ಮತಾಂತರ' ಕತೆ: ವಿಮೋಚನೆಯ ಹುಡುಕಾಟ

ಶ್ರೀಧರ್ ಆರ್.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

DOI: https://doi.org/10.5281/zenodo.17221482

## ABSTRACT:

ಕವಿ ಸಿದ್ಧಲಿಂಗಯ್ಯನವರು ಮನುಷ್ಯತ್ವದ ಸಹಜ ವಿಸ್ತಾರಕ್ಕೆ ಅಡ್ಡಿಯಾಗಿರುವ ಅಸಮಾನತೆಯ ವಿರುದ್ಧ ನಿರಂತರವಾಗಿ ಸ್ಪಂದಿಸಿದವರು. ಕಾವ್ಯ, ನಾಟಕ, ಆತ್ಮಕಥನ, ಸದನದ ಸಂವಾದಗಳು, ಭಾಷಣಗಳು, ವಿಮರ್ಶೆ, ಸಂಶೋಧನಾ ಅಧ್ಯಯನವನ್ನೊಳಗೊಂಡ ಅವರ ಸಮಗ್ರ ಸಾಹಿತ್ಯ ಸಮಾನತೆಯ ಅನ್ವೇಷಣೆ, ಸಾಮಾಜಿಕ ಕಾಳಜಿಯನ್ನು ಪ್ರತಿಪಾದಿಸುತ್ತದೆ. ಹಸಿವು, ಅಸಮಾನತೆಗಳೇ ತಮ್ಮ ಬೌದ್ಧಿಕ ಪ್ರಯಾಣದ ಮೂಲಧಾತುಗಳು ಎಂದು ಅವರು ಪರಿಭಾವಿಸುತ್ತಾರೆ. ಜನರ ಬದುಕನ್ನು ನೇರ್ಪುಗೊಳಿಸುವ ಜೀವಪರವಾದ ನಿಲುವನ್ನು ಅವರ ಗದ್ಯಬರಹಗಳು ಸಾಬೀತುಪಡಿಸುತ್ತವೆ.

ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆ ಹಾಗೂ ಹೋರಾಟದ ಪ್ರಯೋಗ ಎರಡು ಮಾರ್ಗದಲ್ಲಿ ಸಾಗಿದೆ. ಒಂದು, ಸಾಮಾಜಿಕ ಪರಿವರ್ತನೆಯ ಮಾರ್ಗ; ಎರಡನೆಯದು, ಆಧ್ಯಾತ್ಮಿಕ ಅನ್ವೇಷಣೆಯ ಮಾರ್ಗ. ಮೇಲ್ನೋಟಕ್ಕೆ ಎರಡು ಈ ಮಾರ್ಗಗಳು ಭಿನ್ನ ಮತ್ತು ಸಮಾನಾಂತರ ಮಾರ್ಗಗಳಂತೆ ಕಂಡರೂ ಅಂಬೇಡ್ಕರ್ ಚಿಂತನೆ, ಹೋರಾಟ ಮತ್ತು ಅನುಭವದ ನೆಲೆಯಲ್ಲಿ ಇವೆರಡೂ ಒಂದರೊಳಗೊಂದು ಬೆಸೆದುಕೊಂಡಿರುವುದನ್ನು ಗುರುತಿಸಬಹುದು. ಬಾಬಾಸಾಹೇಬರು ತಮ್ಮ ಜೀವಿತಾವಧಿಯ ಕಡೆಯ ಕಾಲದಲ್ಲಿ ಅಕ್ಟೋಬರ್ 14, 1956 ರಂದು ಬೌದ್ಧರಾದುದು ಹತಾಶೆಯಿಂದ ಹುಟ್ಟಿದ ಸಿನಿಕತನದಲ್ಲಿ ಅಲ್ಲ; ಅನುಭವದ ಬೆಳಕಿನಲ್ಲಿ ಮೂಡಿದ ಅರಿವಿನಲ್ಲಿ ಎಂಬುದನ್ನು ನಾವು ಮನಗಾಣಬೇಕಿದೆ.

## KEYWORDS:

ಮತಾಂತರ, ಡಾ. ಬಿ.ಆರ್. ಅಂಬೇಡ್ಕರ್, ಹಿಂದೂ ಧರ್ಮ, ದಲಿತರು, ಸಿದ್ಧಲಿಂಗಯ್ಯ.

ಕನ್ನಡದ ಸಂಸ್ಕೃತಿ ಚಿಂತಕ ಡಿ.ಆರ್. ನಾಗರಾಜ್ ತಮ್ಮ ಮಹತ್ವದ ಪುಸ್ತಕ 'The Flaming Feet' (1993) ಪುಸ್ತಕದಲ್ಲಿ ದಲಿತ ಸಾಹಿತ್ಯದ ಎರಡು ಭಿನ್ನ ಮಾದರಿಗಳನ್ನು ಪ್ರಸ್ತಾಪಿಸುತ್ತಾರೆ. ಅವುಗಳೆಂದರೆ:

1. ಸಾಮಾಜಿಕ ಕ್ರೋಧದ ಮಾದರಿ
2. ಆಧ್ಯಾತ್ಮಿಕ ಹುಡುಕಾಟದ ಮಾದರಿ

ಸಿದ್ದಲಿಂಗಯ್ಯನವರ 'ಮತಾಂತರ' ಕತೆ ಸಾಮಾಜಿಕ ಕ್ರೋಧದ ಮಾದರಿಯ ಅಭಿವ್ಯಕ್ತಿಯಾಗಿದೆ. ಸಿದ್ಧಲಿಂಗಯ್ಯನವರ ಈ ಏಕೈಕ ಕತೆ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಎಲ್. ಹನುಮಂತಯ್ಯ, ಬಿ. ಚಿನ್ನಸ್ವಾಮಿ ಸಂಪಾದಕತ್ವದಲ್ಲಿ ಪ್ರಕಟಗೊಂಡಿರುವ 'ದಲಿತ ಕಥೆಗಳು' (1996) ಸಂಗ್ರಹದಲ್ಲಿದೆ. "ಇಪ್ಪತ್ತನೆಯ ಶತಮಾನದಲ್ಲಿ ಶೂದ್ರರಿಗೆ, ದಲಿತರಿಗೆ, ಮಹಿಳೆಯರಿಗೆ ಗದ್ಯ ಎಂಬ ಉಪಕರಣ ಸಾಧ್ಯವಾದ ಕೂಡಲೇ ಅವರೆಲ್ಲರ ಅಸ್ತಿತ್ವದ ವಿವೇಚನೆಯೇ ಬದಲಾಗಿಬಿಟ್ಟಿತು. ಗದ್ಯ ಎಂದರೆ ಅದು ಚರಿತ್ರೆಯಾಗಿ, ಎಚ್ಚರದ ಅಸ್ತಿತ್ವವಾಗಿ, ಸಮಕಾಲೀನತೆಯನ್ನು ಗತಕಾಲದ ದಿಗ್ವಿಜಯಗಳ ಜೊತೆ ತಕರಾರು ಒಡ್ಡುವ ಕಥನದ ನಾಲಗೆಯಾಗಿ, ತಳಸಮುದಾಯಗಳ ಸಮಷ್ಟಿಯ ನಿರೂಪಣೆಯಾಗಿ ವಿಸ್ತರಿಸಿಕೊಂಡಿತು. ಗದ್ಯ ತಳಸಮುದಾಯಗಳ ಸಂಸ್ಕೃತಿಯ ಸಮಷ್ಟಿ ಅಭಿವ್ಯಕ್ತಿಗೆ ಅಪಾರವಾದ ಶಕ್ತಿ ನೀಡಿದೆ."[1]

ಕತೆಯ ನಿರೂಪಕ ಕತೆಯ ಪ್ರಾರಂಭದಲ್ಲಿ, "ಹಳ್ಳಿಯಲ್ಲಿ ಎಲ್ಲಕ್ಕೂ ಅನಾನುಕೂಲ. ಒಳ್ಳೆ ಟೀ ಅಂತೂ ಸಿಗುವುದಿಲ್ಲ, ಕುಡಿಯುವ ನೀರೋ? ಅದೊಂದು ಶಿಕ್ಷೆ, ಹೋಗುವ ಹಳ್ಳಿಯಲ್ಲಿ ಸಿಹಿ ನೀರು ಸಿಗುತ್ತದೆ ಎಂಬ ಗ್ಯಾರಂಟಿ ಏನು? ಧೂಳು ತುಂಬಿದ ದಾರಿಗಳು ಎಂಥ ಕಣ್ಣಿನಲ್ಲೂ ನೀರು ತರುತ್ತವೆ. ಸುಂಟರಗಾಳಿಯ ಭೂತದ ಕುಣಿತ ತೊಟ್ಟ ಬಟ್ಟೆಗೆಲ್ಲ ಧೂಳು ತುಂಬುತ್ತದೆ. ಯಾವುದಾದರೂ ಪೋಲಿ ದನ ನಡುವೆ ಬಂದು ತಿವಿದು, ಊರು ತಲುಪುವಷ್ಟರಲ್ಲಿಯೇ ಸತ್ತರೆ ಅದೇನೂ ಆಶ್ಚರ್ಯವಲ್ಲ. ಹೆಜ್ಜೆ ಹೆಜ್ಜೆಗೂ ಹಾವಿನ ಭಯ. ಆದ್ದರಿಂದ ನಾನು ಹಳ್ಳಿಗೆ ಹೋಗುವುದೇ ಅಪರೂಪ.

ಒಂದು ಸಲ ಹಳ್ಳಿ ಬಿಟ್ಟ ಮೇಲೆ ಮತ್ತೆ ಹಿಂದಿರುಗಿಯೇ ಇಲ್ಲ. ಪಟ್ಟಣದ ವಾಸವೇನೂ ಸ್ವರ್ಗ ಸಮಾನವಲ್ಲ, ಇಲ್ಲಿಯ ಸಂಕಟಗಳೂ ಭಯಂಕರ. ಆದರೆ ಪಟ್ಟಣ ಎಷ್ಟೋ ವಾಸಿ. ನನ್ನ ಜಾತಿ ಯಾವುದೆಂದು ಯಾರೂ ನನ್ನನ್ನು ಕೇಳಿಲ್ಲ. ಕೆಲವರಿಗೆ ಹೇಗೋ ಗೊತ್ತಾದರೂ ಅದರಿಂದ ನನಗೇನೂ ಹಾನಿ ಆಗಿಲ್ಲ. ಯಾವ ಹೊಟೇಲಿನವರೂ ನನ್ನನ್ನು ತಡೆದಿಲ್ಲ. ಪೂಜಾರಿಗಳು ದೇವಸ್ಥಾನಕ್ಕೆ ಬರಬೇಡ ಎಂದಿಲ್ಲ. ಈ ಬಸ್ಸು, ಕಾರು, ಲಾರಿ ಜನಜಂಗುಳಿ ಒಂದೊಂದು ಸಲ ಹಿಡಿಸುವುದಿಲ್ಲ. ಆದರೂ ಹಳ್ಳಿಯಲ್ಲಿ ಕಾಣಲಾಗದ ಸ್ವಾತಂತ್ರ್ಯವನ್ನು ಇಲ್ಲಿ ಕಂಡಿದ್ದೇನೆ.

ಮಹಾತ್ಮ ಗಾಂಧಿಯವರು ಭಾರತದ ವಿದ್ಯಾವಂತರಿಗೆ 'ಹಳ್ಳಿಗೆ ಮರಳಿ' ಎಂದರು. ಆದರೆ ನಾನು ಮಾತ್ರ ಹಳ್ಳಿಗೆ ಹಿಂದಿರುಗುವುದಿಲ್ಲ. ಯಾಕೆಂದರೆ ಹಳ್ಳಿಯಲ್ಲಿ ನಾನು ಅಸ್ಪೃಶ್ಯ, ನನ್ನ ಆರೋಗ್ಯ ಚಂದಾಗಿದೆ. ಆದರೂ ಅಲ್ಲಿ ನಾನು ಕುಷ್ಟ ರೋಗಿಗಿಂತ ಕಡೆ...''[2] ಎಂದು ಸ್ವಗತದ ನೆಲೆಯಲ್ಲಿ ಸಮೂಹದ ಅನುಭವವನ್ನು ನಿರೂಪಿಸುವಾಗ ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಮಾತುಗಳು ನೆನಪಾಗುತ್ತವೆ:

''ಭಾರತೀಯ ಗ್ರಾಮ ಸ್ವರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಸ್ಥಾನವೇ ಇಲ್ಲ. ಸಮಾನತೆಗಾಗಿ ಅವಕಾಶವೇ ಇಲ್ಲ. ಸ್ವಾತಂತ್ರ್ಯ ಮತ್ತು ಭ್ರಾತೃತ್ವಗಳಿಗೆ ಸ್ಥಾನವೇ ಇಲ್ಲ. ಭಾರತೀಯ ಗ್ರಾಮ ಸ್ವರಾಜ್ಯ ಪರಿಕಲ್ಪನೆಯು ಅವಾಸ್ತವ ಆಗಿರುವುದು. ಅದೊಂದು ಸ್ವರಾಜ್ಯವೆಂದು ಪರಿಗಣಿಸಬಹುದಾದರೆ ಅದು ಸ್ಪೃಶ್ಯರಿಂದ, ಸ್ಪೃಶ್ಯರಿಗಾಗಿ ಮತ್ತು ಸ್ಪೃಶ್ಯರಿಗೋಸ್ಕರವಿರುವ ಸ್ವರಾಜ್ಯವಾಗಿರುವುದು.

ಅಸ್ಪೃಶ್ಯರ ಶೋಷಣೆಯನ್ನು ಮಾಡಲು ಹಿಂದೂಗಳು ರೂಪಿಸಿದ ವಸಾಹತೀಕರಣದ ಒಂದು ವಿಧಾನವಾಗಿರುವುದು. ಅಸ್ಪೃಶ್ಯರಿಗೆ ಯಾವುದೇ ಹಕ್ಕುಗಳಿರುವುದಿಲ್ಲ. ಅವರಿರುವುದು ಕೇವಲ ಕಾಯಲು, ಸೇವೆ ಮಾಡಲು ಮತ್ತು ತಮ್ಮನ್ನು ಸಮರ್ಪಿಸಿಕೊಳ್ಳಲು ಅವರಿರುವುದು ಸೇವೆ ಮಾಡಲು ಇಲ್ಲವೇ ಸಾಯಲು. ಅವರಿಗೆ ಹಕ್ಕುಗಳು ಏಕಿಲ್ಲವೆಂದರೆ ಅವರು ಗ್ರಾಮ ಸ್ವರಾಜ್ಯದ ಹೊರಗಿರುವರು. ಹಿಂದೂ ಸಾಮಾಜಿಕ ವ್ಯವಸ್ಥೆಯಿಂದ ಹೊರಗಿರುವುದೆಂದರೆ ಗ್ರಾಮ ಸ್ವರಾಜ್ಯದ ಹೊರಗುಳಿದಂತೆಯೇ. ಇದೊಂದು ವಿಷ ವರ್ತುಲ. ಇದೊಂದು ವಾಸ್ತವ ಸಂಗತಿ, ಅದನ್ನು ಅಲ್ಲಗಳೆಯಬಾರದು.''[3]

ಹಿಂದೂ ಧರ್ಮದ ಶ್ರೇಣೀಕೃತ ಸಾಮಾಜಿಕ ಅಸಮಾನತೆಯನ್ನು ಕುರಿತಂತೆ ವ್ಯಗ್ರತೆ ಮತ್ತು ವಿಷಾದ ಈ ಕತೆಯಲ್ಲಿ ದಟ್ಟವಾಗಿ ವ್ಯಕ್ತವಾಗಿದೆ. ಕತೆಯ ನಿರೂಪಕನ ಗೆಳೆಯ ಚಿಕ್ಕತಿಮ್ಮಯ್ಯ ಉರುಫ್ ರಮೇಶ, ಬಿ.ಕಾಂ. ಪದವೀಧರ ಬೆಂಗಳೂರಿನಲ್ಲಿ ನೆಲೆಸಿರುವ ಸರ್ಕಾರಿ ನೌಕರ. ರಮೇಶನ ಹುಟ್ಟೂರಾದ 'ಆದಿಪುರ' ಎಂಬ ಗ್ರಾಮದಲ್ಲಿ ಸವರ್ಣೀಯರ ದಬ್ಬಾಳಿಕೆ ಹಾಗೂ ಊಳಿಗಮಾನ್ಯ ವ್ಯವಸ್ಥೆಯ ಕ್ರೌರ್ಯ, ಮಾನವ ಹಕ್ಕುಗಳ ಉಲ್ಲಂಘನೆಯಾಗಿರುವ ಸಾಮಾಜಿಕ ಬಹಿಷ್ಕಾರದಿಂದ ದಲಿತರ ಬದುಕು ಹೈರಾಣಾಗಿರುವುದಕ್ಕೆ ಇಲ್ಲಿನ ಅನೇಕ ಘಟನೆಗಳು ಸಾಕ್ಷಿಯಾಗುತ್ತವೆ.

'ಆದಿಪುರ' ಎಂಬ ಊರಿನ ಹೆಸರೇ ಧ್ವನಿಪೂರ್ಣವಾಗಿದ್ದು, ಆದಿ ಜನಾಂಗದವರ ಬದುಕಿನ ಬವಣೆಯನ್ನು ಕತೆಯು ಸಶಕ್ತವಾಗಿ ನಿರೂಪಿಸುತ್ತದೆ. ಊರಿನಲ್ಲಿ ದಲಿತರಿಗೆ, ಸವರ್ಣೀಯರಿಗೆ ಎರಡು ಪ್ರತ್ಯೇಕ ಬಾವಿಗಳಿವೆ. ಊರೊಳಗಿನ ಹೋಟೆಲಿಗೆ ದಲಿತರಿಗೆ ಪ್ರವೇಶವಿಲ್ಲ. ಹೋಟೆಲಿಗೆ ಗ್ರಾಹಕರಾಗಿ ಹೋದರೂ ಅವರಿಗೆ

ಪ್ರತ್ಯೇಕ ತಟ್ಟೆ ಲೋಟಗಳನ್ನು ಇರಿಸಲಾಗಿದೆ. ಊರಾಚೆ ಇರುವ ಮುತ್ತಿನಮ್ಮನ ದೇವಸ್ಥಾನಕ್ಕೂ ದಲಿತರಿಗೆ ಪ್ರವೇಶವಿಲ್ಲ. ಈ ಎಲ್ಲ ಘಟನೆಗಳು ಆದಿಪುರ ಗ್ರಾಮದಲ್ಲಿ ನಡೆಯುವಂತೆ ಚಿತ್ರಿತವಾಗಿದ್ದರೂ ಈ ತರದ ಘಟನೆಗಳು ಅಥವಾ ಇದಕ್ಕಿಂತಲೂ ಭೀಕರವಾದ ಸನ್ನಿವೇಶಗಳು ಭಾರತದಲ್ಲಿನ ಬಹುತೇಕ ಗ್ರಾಮಗಳಲ್ಲಿನ ಅಸಲಿ ವಸ್ತು ಸ್ಥಿತಿಯಾಗಿದ್ದು, ದಿನನಿತ್ಯದ ಸಹಜ ವಿದ್ಯಮಾನಗಳಾಗಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಹ ದುರಂತ. ನಿರೂಪಕನ ಗೆಳೆಯ ತನ್ನ ಉದ್ಯೋಗದ ನಿಮಿತ್ತ ಬೆಂಗಳೂರು ಮಹಾನಗರದಲ್ಲಿ ಬಾಡಿಗೆ ಮನೆಪಡೆಯಲು ತನ್ನ ಜಾತಿ ಮತ್ತು ತನ್ನ ಹೆಸರನ್ನು ಮರೆಮಾಚಿ ಕೀಳರಿಮೆಯಿಂದ ಬದುಕುವ ದಯನೀಯ ಸ್ಥಿತಿಯು ನಗರಗಳಲ್ಲೂ ಇರುವ ಜಾತಿ ತಾರತಮ್ಯದ ಕ್ರೌರ್ಯವನ್ನು ಅನಾವರಣಗೊಳಿಸುತ್ತದೆ.

ಶಿಕ್ಷಣದಿಂದ ಜಾಗೃತಗೊಂಡಿರುವ ನಿರೂಪಕ ಮತ್ತು ಆತನ ಗೆಳೆಯ ಸಾಮಾಜಿಕ ಶ್ರೇಣೀಕೃತ ಸ್ತರವಿನ್ಯಾಸದ ಶೋಷಣೆಯ ಯಥಾಸ್ಥಿತಿಗೆ ಕಾರಣವಾದ ರೂಢಿ, ಸಂಪ್ರದಾಯಗಳನ್ನು ಧಿಕ್ಕರಿಸುತ್ತಾರೆ. ಸುರಿಯುತ್ತಿರುವ ಮಳೆಯಿಂದ ಪಾರಾಗಲು ಅನಿವಾರ್ಯವಾಗಿ ಊರಾಚೆಯಲ್ಲಿನ ಮುತ್ತಿನಮ್ಮನ ಗುಡಿಯೊಳಗೆ ನುಗ್ಗುವ ರಮೇಶ ಗುಡಿಯಲ್ಲಿ ಯಾರು ಇಲ್ಲದಿರುವುದು ಖಾತ್ರಿಯಾದ ಮೇಲೆ ದೇವರ ವಿಗ್ರಹಕ್ಕೆ ಉಗಿದು ಅದರ ಪಾವಿತ್ರ್ಯತೆಯನ್ನು ಭಂಗಗೊಳಿಸುತ್ತಾನೆ. ನಿರೂಪಕ ದೇವರ ತಲೆಯ ಮೇಲೆ ಚಪ್ಪಲಿಯನ್ನಿಡುವುದರ ಮೂಲಕ ತನ್ನ ಒಡಲಾಳದಲ್ಲಿ ಅದುಮಿಟ್ಟಿರುವ ಸಿಟ್ಟು ಮತ್ತು ಆಕ್ರೋಶವನ್ನು ಹೊರಹಾಕುತ್ತಾನೆ. ಪ್ರಾಥಮಿಕ ಶಾಲೆಯ ಶಿಕ್ಷಕ ಜೋಸೆಫ್ ರಾಜ್ ಜಾತಿಯ ಕಾರಣದಿಂದ ತನಗೆ ಆಗುತ್ತಿರುವ ಅವಮಾನ ಹಾಗೂ ಅನ್ಯಾಯಕ್ಕೆ ವಿರುದ್ಧವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದರೂ ಆತನ ಜೊತೆಯಲ್ಲಿ ಬದುಕುತ್ತಿರುವ ಸವರ್ಣೀಯರಿಂದ ಹಿಂಸೆ ಅನುಭವಿಸುತ್ತಾನೆ. ಒಂದು ರೀತಿಯಲ್ಲಿ ಆತನೂ ಬಹಿಷ್ಕೃತನೆ. ತಾನು ಈಗ ಕ್ರಿಶ್ಚಿಯನ್ ಆಗಿದ್ದರೂ ಮಾಜಿ ಹೊಲೆಯನೆಂಬ ಸಂಕಟದ ಹೊರೆ ಅವನನ್ನು ನೆರಳಿನಂತೆ ಹಿಂಬಾಲಿಸುತ್ತದೆ.

ಆದಿಪುರ ಗ್ರಾಮದಲ್ಲಿರುವ ದಲಿತರೆಲ್ಲರೂ ಸಾಮೂಹಿಕವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿರುವುದರೊಂದಿಗೆ ಕತೆ ಮುಕ್ತಾಯಗೊಳ್ಳುತ್ತದೆ. ಆ ಗ್ರಾಮದಲ್ಲಿನ ದಲಿತ ಕುಟುಂಬಗಳು ತಮ್ಮ ಉಳಿವಿನ ನಿರ್ಣಾಯಕ ಪರಿಸ್ಥಿತಿಯಲ್ಲಿ ಹಿಂದೂ ಧರ್ಮವನ್ನು ತಿರಸ್ಕರಿಸುತ್ತಾರೆ. ಕತೆಯ ಹಿನ್ನೆಲೆಯನ್ನು ಪರಿಶೀಲಿಸಿದಾಗ ನೈಜ ಘಟನಾವಳಿಗಳು ಕತೆಗಾರರಿಗೆ ಕಾಡಿರುವ ಸಂಭವನೀಯತೆಯನ್ನು ಊಹಿಸಬಹುದು. ಸುಮಾರು ನಾಲ್ಕು ದಶಕಗಳ ಹಿಂದೆ 1981 ಫೆಬ್ರವರಿ 19 ರಂದು ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ 'ಮೀನಾಕ್ಷಿಪುರಂ' ಎಂಬ ಊರನ್ನು 'ರಹಮತ್ ನಗರ' ಎಂದು ಬದಲಾಯಿಸಿ ಅಲ್ಲಿದ್ದ ಸುಮಾರು 180 ದಲಿತ ಕುಟುಂಬಗಳು ಇಸ್ಲಾಂ ಧರ್ಮಕ್ಕೆ ಸಾಮೂಹಿಕವಾಗಿ ಮತಾಂತರಗೊಂಡವು.

ದೇವನೂರ ಮಹಾದೇವ ತಮ್ಮ ಲೇಖನದಲ್ಲಿ ದಲಿತರ ಈ ಸಾಮೂಹಿಕ ಮತಾಂತರವನ್ನು ಕುರಿತಂತೆ "ಯಾವ ಮತವೂ ಬೇಡ ಅನ್ನುವ ನನ್ನ ನಾಲಿಗೆಯು ನನ್ನ ಜನರ ಪ್ರಾಣಪಕ್ಷಿ ಮತ್ತು ಛಿದ್ರರಾಗಿರುವ ದಲಿತ ಸಮುದಾಯಗಳು ಕನಿಷ್ಠ ಹೀಗಾದರೂ ಒಂದಾಗಬಹುದಾದ ಆಸೆಯಿಂದಾಗಿ ಮತಾಂತರ ಬೇಡ ಎಂದು ನುಡಿಯದಂತಾಗಿದೆ."[4] ಎಂದು ಹೇಳುತ್ತಾರೆ.

ದಲಿತರ ವಿಮೋಚನೆಗೆ ಮತಾಂತರ ಪರಿಹಾರವೇ? ಎಂಬ ಪ್ರಶ್ನೆಯ ಜೊತೆಗೆ ಹಿಂದೂ ಧರ್ಮದಲ್ಲಿದ್ದು ಅವರು ಪಡೆದುಕೊಂಡಿರುವುದಾದರೂ ಏನು? ಮೇಲು ಕೀಳಿನ ವಿಷವರ್ತುಲದ ಸಮಾಜ ಅವರನ್ನು ಹೇಗೆ ಪರಿಭಾವಿಸಿದೆ? ಎಂಬ ಮೂಲಭೂತ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಹೊರಟಾಗ ದುಃಖ ಆರದ ಈ ನೆಲದಲ್ಲಿ ಸಂಭವಿಸಿರುವ ಹಲವು ಅಮಾನವೀಯ ಘಟನೆಗಳು, ರಕ್ತದ ಕಲೆಗಳು ನಮ್ಮ ಕಣ್ಮುಂದೆ ಸುಳಿಯುತ್ತವೆ. "ಭಾರತದಲ್ಲಿ ಮತಾಂತರ ಪ್ರಕರಣಗಳು ಧಾರ್ಮಿಕ ನಂಬಿಕೆಗಳ ಮತಾಂತರಗಳಾಗದೆ ಹಿಂದೂಧರ್ಮದಲ್ಲಿನ ಜಾತಿವ್ಯವಸ್ಥೆ ವಿರುದ್ಧದ ನೇರ ಪ್ರತಿಭಟನೆಗಳಾಗಿವೆ. ಮತಾಂತರಗಳು ಹೆಚ್ಚಾಗಿ ತಳಜಾತಿಗಳಲ್ಲೇ ಆಗುತ್ತಿರುವುದಕ್ಕೆ ವಿಶೇಷ ಕಾರಣಗಳಿರಬೇಕು. ಅವೆಂದರೆ ಜಾತಿಯ ಏಣಿಮೆಟ್ಟಿಲಿನ ತಳಭಾಗದಲ್ಲಿರುವ ಜಾತಿಗಳು ತಮ್ಮ ಮೇಲಾಗುತ್ತಿರುವ ಮಾನಸಿಕ ದೌರ್ಜನ್ಯ ಮತ್ತು ದೈಹಿಕ ಹಲ್ಲೆಗಳಿಂದ ಪಾರಾಗುವ ಏಕೈಕ ಮಾರ್ಗವಾಗಿ ಮತಾಂತರ ಗೊಂಡಿರುವುದರಲ್ಲಿ ಆಶ್ಚರ್ಯವಿಲ್ಲ. ಎರಡನೆಯದಾಗಿ ಮತಾಂತರ ಸ್ವಾಭಿಮಾನದ ಸಂಕೇತ ಕೂಡ ಆಗಿರುತ್ತದೆ. ಸಹ ಮಾನವರ ಬಗ್ಗೆ ಕಿಂಚಿತ್ತೂ ಸಹಾನುಭೂತಿ, ಪ್ರೀತಿ–ಕರುಣೆಗಳನ್ನು ತೋರದ ಧರ್ಮದಿಂದ ದೂರವಾಗುವುದೇ ಸರಿಯಾದದ್ದೆಂದು ಭಾವಿಸಿ ಅಸ್ಪೃಶ್ಯರಾದಿಯಾಗಿ ಅನೇಕ ತಳಜಾತಿಗಳು ಗುಂಪುಗಳಾಗಿ ಮತಾಂತರವಾಗುತ್ತಿದ್ದಾರೆ, ಮತಾಂತರಗಳು ಆರ್ಥಿಕ ಸಮಾನತೆಯನ್ನು ತಾರದಿದ್ದರೂ ಮಾನಸಿಕವಾಗಿ ಬಿಡುಗಡೆಯ ಅಸ್ತ್ರಗಳಾಗಿ ಪರಿಣಮಿಸಿವೆ."[5] ಎಂದು ಎಲ್. ಹನುಮಂತಯ್ಯನವರು ಅಭಿಪ್ರಾಯಪಡುತ್ತಾರೆ.

ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಮೇ 31, 1936 ರಂದು ಮುಂಬೈ ಪ್ರಾಂತ್ಯದ ಮಹಾರ್ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ ಭಾರತದಲ್ಲಿ ದಲಿತರಿಗೆ 'ಮತಾಂತರ ಯಾಕೆ?' ಅನಿವಾರ್ಯ ಎಂಬುದನ್ನು ವಿವರಿಸುತ್ತಾರೆ. ಆ ಭಾಷಣದ ಆಯ್ದ ಭಾಗವನ್ನು ಇಲ್ಲಿ ಉಲ್ಲೇಖಿಸುವುದಾದರೆ,

"ಹಿಂದೂ ಧರ್ಮ ನನ್ನ ಆತ್ಮಸಾಕ್ಷಿಗೆ ಒಪ್ಪಿಗೆಯಾಗುವುದಿಲ್ಲ. ಅದು ನನ್ನ ಆತ್ಮಗೌರವಕ್ಕೆ ಸಮ್ಮತವಾಗುವುದಿಲ್ಲ. ಅದೇ, ಮತಾಂತರವು ನಿಮ್ಮ ಐಹಿಕ ಮತ್ತು ಆಧ್ಯಾತ್ಮಿಕ ಉನ್ನತಿಗಳೆರಡಕ್ಕೂ ಬೇಕು. ಕೆಲವರು ಐಹಿಕ ಲಾಭಕ್ಕಾಗಿ ಮತಾಂತರ ಎಂದರೆ ಅಪಹಾಸ್ಯ ಮಾಡಿ ನಗಬಹುದು. ಅಂಥವರನ್ನು ಮೂರ್ಖರೆಂದು ಕರೆಯಲು

ನಾನೇನೂ ಹಿಂಜರಿಯುವುದಿಲ್ಲ.

ಧರ್ಮ ಇರುವುದು ಮನುಷ್ಯನಿಗಾಗಿ, ಮನುಷ್ಯನಿರುವುದು ಧರ್ಮಕ್ಕಲ್ಲ. ಧರ್ಮ ಜೀವನ ಸಂಗತಿಗಳಿಗೆ ಸಂಬಂಧಿಸಿರಬೇಕು, ದೇವರು ಅಥವಾ ಆತ್ಮ ಅಥವಾ ಸ್ವರ್ಗ ಅಥವಾ ಭೂಮಿ ಬಗೆಗಿನ ಊಹೆಗಳು ಮತ್ತು ವಾದಗಳಿಗಲ್ಲ ಇದನ್ನು ನಾನು ತುಂಬಾ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮಾನವೀಯ ನಡವಳಿಕೆ ಬೇಕೆಂದಾದರೆ ಮತಾಂತರಗೊಳ್ಳಿ.

**ಸಂಘಟಿತರಾಗಲು ಮತಾಂತರಗೊಳ್ಳಿ**

**ಸಶಕ್ತರಾಗಲು ಮತಾಂತರಗೊಳ್ಳಿ**

**ಸಮಾನತೆಗಾಗಿ ಮತಾಂತರಗೊಳ್ಳಿ**

**ಸ್ವಾತಂತ್ರ್ಯಕ್ಕಾಗಿ ಮತಾಂತರಗೊಳ್ಳಿ**

**ನಿಮ್ಮ ಕೌಟುಂಬಿಕ ಜೀವನ ಸಂತೋಷಮಯವಾಗಲು ಮತಾಂತರಗೊಳ್ಳಿ...**

ಇನ್ನು ನೀವೇ ನಿರ್ಧರಿಸಿ, ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಿ.''[6] ಡಾ. ಅಂಬೇಡ್ಕರ್ ಈ ಭಾಷಣದ ಸರಿಸುಮಾರು ಇಪ್ಪತ್ತು ವರ್ಷಗಳ ನಂತರ, ತಮ್ಮ ಜೀವಿತಾವಧಿಯ ಕಡೆಯ ಕಾಲದಲ್ಲಿ (ಅಕ್ಟೋಬರ್ 14, 1956) ಬೌದ್ಧರಾದುದು ಹತಾಶೆಯಿಂದ ಹುಟ್ಟಿದ ಸಿನಿಕತನದಲ್ಲಿ ಅಲ್ಲ; ಅನುಭವದ ಬೆಳಕಿನಲ್ಲಿ ಮೂಡಿದ ಅರಿವಿನಲ್ಲಿ ಎಂಬುದನ್ನು ನಾವು ಮನಗಾಣಬೇಕಿದೆ. ಡಾ. ಅಂಬೇಡ್ಕರ್ ಅವರ ಚಿಂತನೆ ಹಾಗೂ ಹೋರಾಟದ ಪ್ರಯೋಗ ಎರಡು ಮಾರ್ಗದಲ್ಲಿ ಸಾಗಿದೆ. ಒಂದು, ಸಾಮಾಜಿಕ ಪರಿವರ್ತನೆಯ ಮಾರ್ಗ; ಎರಡನೆಯದು, ಆಧ್ಯಾತ್ಮಿಕ ಅನ್ವೇಷಣೆಯ ಮಾರ್ಗ. ಮೇಲ್ನೋಟಕ್ಕೆ ಎರಡು ಈ ಮಾರ್ಗಗಳು ಭಿನ್ನ ಮತ್ತು ಸಮಾನಾಂತರ ಮಾರ್ಗಗಳಂತೆ ಕಂಡರೂ ಅಂಬೇಡ್ಕರ್ ಚಿಂತನೆ, ಹೋರಾಟ ಮತ್ತು ಅನುಭವದ ನೆಲೆಯಲ್ಲಿ ಇವೆರಡೂ ಒಂದರೊಳಗೊಂದು ಬೆಸೆದುಕೊಂಡಿರುವುದನ್ನು ಗುರುತಿಸಬಹುದು. ''ಅಂಬೇಡ್ಕರ್ ಬೌದ್ಧಧರ್ಮದ ಮಡಿಲಿಗೆ ನಡೆದದ್ದು ಹೆಚ್ಚು ಸಮಗ್ರವಾದ ಜೀವನ ಕ್ರಮದ, ಸಮಾಜ ಪುನರ್ ನಿರ್ಮಾಣದ ಮಾದರಿಗಳನ್ನು ಹುಡುಕುವ ಪ್ರಯತ್ನದ ಅಂಗವಾಗಿಯೇ... ಅಂಬೇಡ್ಕರರಿಗೆ ಬೌದ್ಧಧರ್ಮ ಎನ್ನುವುದು ತನ್ನ ಹೋರಾಟಕ್ಕೆ ಸಿಕ್ಕಿದ ಚಾರಿತ್ರಿಕ ಸಮರ್ಥನೆ. ಚಾರಿತ್ರಿಕವಾದ ಸ್ಥಿತಿಯೊಂದನ್ನು ವರ್ತಮಾನಕ್ಕೆ ತರುವ ಮೂಲಕ ತಮ್ಮ ಹೋರಾಟಕ್ಕೆ ದೊಡ್ಡ ಪರಂಪರೆಯೊಂದನ್ನು ನಿರ್ಮಿಸಿಕೊಳ್ಳುವ ಪ್ರಯತ್ನ ಅದು. ದಲಿತರಿಗೆ ದೊಡ್ಡ ಸಾಂಸ್ಕೃತಿಕ ಪರಂಪರೆಯೊಂದನ್ನು ಕಟ್ಟಿಕೊಡುವ ಮಹಾನ್ ಪ್ರಯತ್ನದ ಭಾಗ ಅದು. ತಮ್ಮ ಹೋರಾಟ ಬರೀ ವರ್ತಮಾನದ್ದಲ್ಲ ಎಂದು ಸಾಧಿಸುವ ಹಠ ಅಲ್ಲಿ ಮುಖ್ಯ.

ಚರಿತ್ರೆಯ ಆಳದಿಂದ ತಮ್ಮ ಆಶಯಗಳನ್ನು, ಪ್ರತಿಮೆಗಳನ್ನು ಎತ್ತಿಕೊಳ್ಳುವ ಪ್ರಯತ್ನ ಇಲ್ಲಿ ತುಂಬ ಮಹತ್ವದ ಪಾತ್ರ ವಹಿಸುತ್ತದೆ. ಚರಿತ್ರೆಯನ್ನೇ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುವ ಪ್ರಯತ್ನದಿಂದಾಗಿ ವರ್ತಮಾನದ ಹೋರಾಟಕ್ಕೆ ಬೇರೆಯೇ ಆದ ಬಣ್ಣ, ಖದರು ಬಂದುಬಿಡುತ್ತದೆ.”[7]

ಕವಿ ಸಿದ್ದಲಿಂಗಯ್ಯನವರ 'ಮತಾಂತರ' ಕತೆ ಅಸ್ಪೃಶ್ಯ ಭಾರತದ ನೈಜ ದರ್ಶನವನ್ನು ಅನಾವರಣ ಮಾಡುತ್ತದೆ.

**ಕೊನೆ ಟಿಪ್ಪಣಿಗಳು:**

1. ತಕರಾರು: ಮೊಗಳ್ಳಿ ಗಣೇಶ್, 'ಅಗ್ನಿ,' ಪತ್ರಿಕೆ, ಸಂಪಾದಕರು: ಶ್ರೀಧರ್ (ಸಂಪುಟ: 05, ಪುಟ: 17, ನವೆಂಬರ್, 2002)
2. ಮತಾಂತರ: ಸಿದ್ಧಲಿಂಗಯ್ಯ, ದಲಿತ ಕಥೆಗಳು: ಸಂಪಾದಕರು: ಎಲ್. ಹನುಮಂತಯ್ಯ, ಬಿ. ಚಿನ್ನಸ್ವಾಮಿ (ಪುಟ: 238, 1996)
3. 'ಭಾರತದ ಕೊಳೆಗೇರಿ– ಅಸ್ಪೃಶ್ಯತೆಯ ಕೇಂದ್ರ' ವೀಸಾದ ನಿರೀಕ್ಷೆಯಲ್ಲಿ ನೆನಪುಗಳು, ಮೂಲ: ಡಾ. ಬಿ.ಆರ್. ಅಂಬೇಡ್ಕರ್, ಕನ್ನಡಕ್ಕೆ: ಸದಾಶಿವ ಮರ್ಜಿ (ಪುಟ: 86, 2015)
4. 'ಬೇಡ ಎನಲಿ ಯಾವ ನಾಲಿಗೆಯಲಿ?' ದೇವನೂರ ಮಹಾದೇವ (ಪಂಚಮ, ಸಂಪಾದಕರು: ರಾಮದೇವ ರಾಕೆ, ಸಂಪುಟ: 05, ಸಂಚಿಕೆ: 15–16, ಪುಟ: 16, ಅಕ್ಟೋಬರ್, 1981)
5. 'ಮತಾಂತರದ ಕಥನ' ಡಾ. ಎನ್. ಚಿನ್ನಸ್ವಾಮಿ ಸೋಸಲೆ, ದಲಿತರು ಮತ್ತು ಮತಾಂತರ: ಒಂದು ಚಿಂತನೆ (ಪುಟ: 39, 2009)
6. 'ಮತಾಂತರ ಯಾಕೆ?' ಮೂಲ: ಡಾ ಬಿ.ಆರ್ ಅಂಬೇಡ್ಕರ್, ಕನ್ನಡಕ್ಕೆ: ಎನ್.ಎಸ್. ಶಂಕರ್, ಪಂಚಮ: ಡಾ. ಬಿ.ಆರ್. ಅಂಬೇಡ್ಕರ್ ಜನ್ಮದಿನ ವಿಶೇಷಾಂಕ (ಸಂಪಾದಕರು: ಕೆ. ರಾಮಯ್ಯ, ಸಂಪುಟ: 12, ಸಂಚಿಕೆ: 07–08, ಪುಟ: 22, ಏಪ್ರಿಲ್, 1988)
7. 'ಅಂಬೇಡ್ಕರ್ ಮತ್ತು ಬೌದ್ಧಧರ್ಮ' ಡಿ.ಆರ್. ನಾಗರಾಜ್ (ಸಂಸ್ಕೃತಿ ಕಥನ, ಸಂಪಾದಕರು: ಅಗ್ರಹಾರ ಕೃಷ್ಣಮೂರ್ತಿ, ಪುಟ: 186–187, 2002)

**ಪರಾಮರ್ಶನ ಗ್ರಂಥಗಳು:**


1. ಹನುಮಂತಯ್ಯ ಎಲ್. & ಚಿನ್ನಸ್ವಾಮಿ ಬಿ. (ಸಂ), (1996), ದಲಿತ ಕಥೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
2. ನಾಗರಾಜ್ ಡಿ.ಆರ್. (ಮೂಲ), ಆಶಾದೇವಿ ಎಂ.ಎಸ್. (ಅನು), (2002), ಉರಿ ಚಮ್ಮಾಳಿಗೆ: ದಲಿತ ಚಳವಳಿಯ ಅಧ್ಯಯನ, ವಸಂತ ಪ್ರಕಾಶನ, ಬೆಂಗಳೂರು.
3. ದೇವನೂರ ಮಹಾದೇವ, (2012), ಎದೆಗೆ ಬಿದ್ದ ಅಕ್ಷರ, ಅಭಿನವ, ಬೆಂಗಳೂರು.
4. ಸುಮಾ ಬಿ.ಯು. (ಸಂ), (2008), ಡಾ. ಬಿ.ಆರ್. ಅಂಬೇಡ್ಕರ್: ವರ್ತಮಾನದೊಂದಿಗೆ ಮುಖಾಮುಖಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
5. ಅಂಬೇಡ್ಕರ್ ಬಿ.ಆರ್. (ಮೂಲ), ಸದಾಶಿವ ಮರ್ಜಿ (ಅನು), (2011), ವೀಸಾದ ನಿರೀಕ್ಷೆಯಲ್ಲಿ ನೆನಪುಗಳು, ಲಡಾಯಿ ಪ್ರಕಾಶನ, ಗದಗ.
6. ಚಿನ್ನಸ್ವಾಮಿ ಸೋಸಲೆ ಎನ್., (2009), ದಲಿತರು ಮತ್ತು ಮತಾಂತರ: ಒಂದು ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಚಿನ್ನಸ್ವಾಮಿ ಸೋಸಲೆ ಎನ್., (2012), ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರು ಮತ್ತು ಮತಾಂತರ, ಯಾಜಿ ಪ್ರಕಾಶನ, ಹೊಸಪೇಟೆ.
8. ದಿವಾಕರ ನಾ., (2022), ಮತಾಂತರ: ವ್ಯಕ್ತಿ ಸ್ವಾತಂತ್ರ್ಯದ ಆದಿಮ ಹಾದಿ, ಲಡಾಯಿ ಪ್ರಕಾಶನ, ಗದಗ.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.